

ಓಸ್ಲೋ ಫಿಯೊರ್ಡ್‌ನಲ್ಲಿ ತೇಲುವ ಮಂಜುಗಡ್ಡೆಯ ಮಾದರಿ
ಚಿತ್ರಗಳು: ಸ್ವರೂಪ್ ಕೆ.ಎಸ್

ಸುಮಾರು ಹದಿಮೂರನೆಯ ಶತಮಾನದಲ್ಲಿ ಇದರ ಅಡಿಪಾಯ ಹಾಕಲಾಗಿತ್ತೆಂದು ಲಿಖಿತ ದಾಖಲೆಗಳು ಹೇಳುತ್ತವೆ. ಪೂರ್ಣಗೊಂಡಿದ್ದು ಯಾವಾಗ ಎಂಬ ಸರಿಯಾದ ಮಾಹಿತಿಗಳು ದೊರಕಿಲ್ಲ. ಅಕ್ಕಪಕ್ಕದ ರಾಜ್ಯಗಳೊಂದಿಗೆ ನಡೆಯುತ್ತಿದ್ದ ಯುದ್ಧಗಳಲ್ಲಿ ಬಹಳಷ್ಟು ಬಾರಿ ಶತ್ರುಗಳ ವಶವಾಗಿತ್ತು ಈ ಕೋಟೆ. ಆದರೂ ದಂಡಿಗೆ ಹೆದರಲಿಲ್ಲ, ದಾಳಿಗೆ ಹೆದರಲಿಲ್ಲ ಎಂಬಂತೆ ಇನ್ನೂ ಕೋಟೆಯ ಹಲವು ಭಾಗಗಳು ನಮಗೆ ಕಾಣಸಿಗುತ್ತವೆ.

ಕೋಟೆಯ ಹತ್ತಿ, ಸುತ್ತಿ ಕೆಳಗಿಳಿದರೆ ಹತ್ತಿರದಲ್ಲೇ ಕೆಂಪು ಇಟ್ಟಿಗೆಗಳಿಂದ ಕಟ್ಟಲಾಗಿರುವ ನಗರ ಸಭಾಭವನವನ್ನು ಕಾಣಬಹುದು. ಸುಮಾರು 1931ರಲ್ಲಿ ಪ್ರಾರಂಭವಾಗಿ, ವಿಶ್ವಯುದ್ಧದ ಸಮಯದಲ್ಲಿ ಸ್ಥಗಿತಗೊಂಡು, 1950ರಲ್ಲಿ ನಿರ್ಮಾಣಗೊಂಡಿರುವ ಈ ಕಟ್ಟಡದಲ್ಲಿ ಎರಡು ಗೋಪುರಗಳಿವೆ. ಈ ಕಟ್ಟಡದ ವಿಶೇಷ ಏನೆಂದರೆ, ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪ್ರತಿವರ್ಷ ಡಿಸೆಂಬರ್ ತಿಂಗಳಿನಲ್ಲಿ ಇಲ್ಲಿಯೇ ನೀಡಲಾಗುತ್ತದೆ.

ಇನ್ನು ಓಸ್ಲೋ ಫಿಯೋರ್ಡ್‌ನ ಮೇಲೆ ತೇಲುವ ಅನುಭವ ಬೇಕೆಂದರೆ ಫೆರ್‍ರಿ (ದೊಡ್ಡ ಬೋಟು)ಗಳಿರುತ್ತವೆ. ಉತ್ತರ ಸಮುದ್ರದ ನೀರು ಒಳಮುಖವಾಗಿ ಒತ್ತಿ ಅಲ್ಲಲ್ಲಿ ಹಲವಾರು ದ್ವೀಪಗಳನ್ನು ಸೃಷ್ಟಿಸಿದೆ. ಫೆರ್‍ರಿಗಳ ಮೂಲಕ ಈ ದ್ವೀಪಗಳನ್ನು ತಲುಪಬಹುದು. ಕೆಲವು ದ್ವೀಪಗಳಲ್ಲಿ ಜನವಸತಿ ಇದ್ದರೂ ಹಲವೆಡೆಗಳಲ್ಲಿ ಹಸಿರ ವನಸಿರಿ ಇ ದ್ದು ಆರಾಮವಾಗಿ ನಡೆದಾಡಲು ಅವಕಾಶವಿದೆ. ಹೂವೇದೋಯ ಎಂಬ ದ್ವೀಪವೊಂದರಲ್ಲಿ ಮಧ್ಯಕಾಲೀನ ಯುಗದ ಮೊನಾಸ್ಟರಿಯೊಂದರ ಅವಶೇಷಗಳಿವೆ.

ದ್ವೀಪಗಳಿಗೊಮ್ಮೆ ಭೇಟಿಕೊಟ್ಟು ನಂತರ ಓಸ್ಲೋ ನಗರಿಯ ಮುಖ್ಯ ಬೀದಿಯಾದ ಕಾರ್ಲ್ ಯೊಹಾನ್ ಗೇಟ್‌ನಲ್ಲಿ ಹೆಜ್ಜೆ ಹಾಕಿದರೆ, ಆ ರಸ್ತೆಯ ಕೊನೆಯಲ್ಲಿ ಎತ್ತರದ ದಿಣ್ಣೆಯ ಮೇಲೆ ಇರುವ ಅರಮನೆಯನ್ನು ಕಾಣಬಹುದು. ತೀರಾ ಹಳೆಯದಲ್ಲದಿದ್ದರೂ 19ನೇ ಶತಮಾನ ಮೊದಲಾರ್ಧದಲ್ಲಿ ಆಗಿನ ರಾಜ ಮೂರನೇ ಚಾರ್ಲ್ಸ್ ಜಾನ್‌ಗೋಸ್ಕರ ಕಟ್ಟಲ್ಪಟ್ಟಿತು. ಈಗಲೂ ಸುಸ್ಥಿತಿಯಲ್ಲಿರುವ ಈ ಅರಮನೆಯಲ್ಲಿ ಪ್ರಸ್ತುತ ರಾಜ ಹರಾಲ್ಡ್ ವಾಸವಾಗಿದ್ದಾರೆ. ಸದ್ಯಕ್ಕೆ ಸಾರ್ವಜನಿಕರಿಗೆ ಅರಮನೆಯ ಒಳಗೆ ಹೋಗಲು ಅವಕಾಶವಿಲ್ಲವಾದರೂ ಸುತ್ತಲೂ ಇರುವ ಉದ್ಯಾನವನಕ್ಕೆ ಸುಂಕರಹಿತ ಪ್ರವೇಶವಿದೆ.

ಅಲ್ಲಿಂದ ಬಸ್ ಅಥವಾ ಟ್ರಾಮ್ ಹತ್ತಿ ಬಿಗ್ಡಾಯ್ ಪರ್ಯಾಯ ದ್ವೀಪವನ್ನು ತಲುಪಿದರೆ ಅಲ್ಲಿ ಹಲವಾರು ವಸ್ತುಸಂಗ್ರಹಾಲಯಗಳಿವೆ. ನಾನು ಬಹಳ ಇಷ್ಟಪಟ್ಟ ಜಾಗ, ಅಲ್ಲಿನ ಜಾನಪದ ವಸ್ತುಸಂಗ್ರಹಾಲಯ. ಇದು ಹೊರಾಂಗಣದಲ್ಲಿ ಇರುವ ಸಂಗ್ರಹಾಲಯವಾಗಿದ್ದು, ದೇಶದ ಬೇರೆ ಬೇರೆ ಪ್ರದೇಶಗಳ ವೈವಿಧ್ಯದ ಕಟ್ಟಡಗಳನ್ನು ಕಾಣಬಹುದು. ಹಿಂದೆ ಯಾವ ರೀತಿಯ ಮನೆಗಳನ್ನು ಕಟ್ಟಲಾಗುತ್ತಿತ್ತು, ಅಲ್ಲಿನ ಜನಜೀವನ, ದೈನಂದಿನ ಬದುಕು ಹೇಗಿತ್ತು ಎಂಬುದರ ಬಗ್ಗೆ ಮಾಹಿತಿ ದೊರೆಯುತ್ತದೆ. ಒಟ್ಟು 150ಕ್ಕೂ ಹೆಚ್ಚು ಕಟ್ಟಡಗಳಿದ್ದು ಕೆಲವನ್ನು ಮೂಲ ಸ್ಥಾನದಿಂದ ಸ್ಥಳಾಂತರಿಸಿ ಇಲ್ಲಿ ತಂದಿಡಲಾಗಿದ್ದರೆ, ಇನ್ನು ಕೆಲವು ಪ್ರತಿಕೃತಿಗಳು. ಇಲ್ಲಿನ ಮುಖ್ಯ ಆಕರ್ಷಣೆ ಗೋಲ್ ಸ್ಟೇವ್ ಚರ್ಚ್. ಗೋಲ್ ಎಂಬ ಸ್ಥಳದಲ್ಲಿ ಇದ್ದ ಮರದ ಈ ಚರ್ಚ್ ಅನ್ನು ಅಲ್ಲಿಂದ ಈ ಸಂಗ್ರಹಾಲಯಕ್ಕೆ ತಂದಿಡಲಾಗಿದೆ. ಹತ್ತಿರದಲ್ಲಿ ವೈಕಿಂಗ್ ಜನಜೀವನದ ಬಗ್ಗೆ ಮಾಹಿತಿ ನೀಡುವ, ಅವರು ಬಳಸುತ್ತಿದ್ದ ಆಯುಧಗಳು, ಬಟ್ಟೆಗಳು, ಶಿರಸ್ತ್ರಾಣಗಳು, ಶಿಪ್‌ಗಳು ಮುಂತಾದವನ್ನು ಪ್ರದರ್ಶನಕ್ಕಿಟ್ಟ ವೈಕಿಂಗ್ ಶಿಪ್ ಸಂಗ್ರಹಾಲಯ, ಫ್ರಾಮ್ ಮ್ಯೂಸಿಯಮ್ ಮುಂತಾದ ಆಸಕ್ತಿಕರ ಜಾಗಗಳಿವೆ.



ಫ್ರಾಗ್ನರ್ ಉದ್ಯಾನದಲ್ಲಿನ ಆಕರ್ಷಕ ಪ್ರತಿಮೆಗಳು
ಚಿತ್ರಗಳು: ಸ್ವರೂಪ್ ಕೆ.ಎಸ್

## ಫ್ರಾಗ್ನರ್ ಪಾರ್ಕ್

ನಗರದ ಪಶ್ಚಿಮ ದಿಕ್ಕಿನಲ್ಲಿ ಇರುವ 'ಫ್ರಾಗ್ನರ್ ಪಾರ್ಕ್' ಹಿಂದೆ ಶ್ರೀಮಂತ ಮನೆತನವೊಂದಕ್ಕೆ ಸೇರಿತ್ತು. ಕಾಲಾನಂತರದಲ್ಲಿ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಸಾರ್ವಜನಿಕ ಉದ್ಯಾನವನವಾಗಿ ಮಾರ್ಪಾಡಾಯಿತು. ಈಗ ಗುಸ್ತಾವ್ ವಿಗಾಲ್ಯಾಂಡ್ ಎನ್ನುವ ಶಿಲ್ಪಿ 1924ರಿಂದ 1943ರವರೆಗೆ ಕೆತ್ತಿದ ಬಹಳಷ್ಟು ಕಲ್ಲಿನ ಪ್ರತಿಮೆಗಳನ್ನು ಇಲ್ಲಿ ಸ್ಥಾಪಿಸಲಾಗಿದೆ. ಅವನ ಕೈಚಳಕವನ್ನು ನೋಡಿಯೇ ಸವಿಯಬೇಕು.

ಇವಿಷ್ಟೇ ಅಲ್ಲದೆ, ಇನ್ನೂ ಹಲವಾರು ಆಕರ್ಷಣೆಗಳನ್ನು ಓಸ್ಲೋ ತನ್ನೊಳಗೆ ಅಡಗಿಸಿಕೊಂಡಿದೆ. ಪ್ರಪಂಚದ ಪ್ರಸಿದ್ಧ ಕಲಾಕೃತಿಗಳಲ್ಲಿ ಒಂದಾದ 'ದಿ ಸ್ಕ್ರೀಮ್' ಇಲ್ಲಿನ ನ್ಯಾಷನಲ್ ಗ್ಯಾಲರಿಯಲ್ಲಿದೆ. ರೆಸ್ಟೋರೆಂಟ್‌ಗಳು, ವಿವಿಧ ಮಾರುಕಟ್ಟೆಗಳು, ಬೇಸಿಗೆಯಲ್ಲಿ ಬಂದರೆ ಹೂವು–ಹಣ್ಣುಗಳು, ಚಳಿಗಾಲದಲ್ಲಿ ಬಂದರೆ ಸುರಿವ ಹಿಮ, ಶರದೃತುವಿನಲ್ಲಿ ಕೆಂಪು, ಹಳದಿ, ಕೇಸರಿ ಬಣ್ಣ ತಳೆದ ಎಲೆಗಳು ನಮ್ಮನ್ನು ಸ್ವಾಗತಿಸುತ್ತವೆ. ಯಾವ ಸಮಯದಲ್ಲಿ ಸಂದರ್ಶಿಸಿದರೂ ನಾರ್ವೆಯ ಈ ಪುಟ್ಟ ರಾಜಧಾನಿ ಪ್ರವಾಸ ಪ್ರೇಮಿಗಳಿಗೆ ರಸದೌತಣ ನೀಡುವುದರಲ್ಲಿ ಸಂದೇಹವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in



ಸ್ಟೇವ್ ಚರ್ಚ್ ಫೋಕ್ ಮ್ಯೂಸೀಯಂ
ಚಿತ್ರಗಳು: ಸ್ವರೂಪ್ ಕೆ.ಎಸ್